# ಸಮಾಜಮುಖಿ ಭಾವ ಪ್ರಜ್ಞೆಯ ಮಡಿವಾಳಪ್ಪನವರ ತತ್ವಪದಗಳು

**ಸಾಯಿಬಣ್ಣ**
ಸಹಾಯಕ ಪ್ರಾಧ್ಯಾಪಕರು
ಸಮಾಜಶಾಸ್ತ್ರ ವಿಭಾಗ
ಶ್ರೀ ಪ್ರಭು ಕಲಾ, ವಿಜ್ಞಾನ ಮತ್ತು
ಜೆ. ಎಂ. ಬೋಹರಾ ವಾಣಿಜ್ಯ
ಪದವಿ ಮಹಾವಿದ್ಯಾಲಯ
ಸುರಪುರ, ಯಾದಗಿರಿ.

Article Link: https://aksharasurya.com/2024/02/saibanna-m.php

## ABSTRACT:

ಪ್ರಸ್ತುತ ಸಮಕಾಲಿನ ಸಾಮಾಜಿಕ ಸಂದರ್ಭದಲ್ಲಿ ತತ್ವಪದಗಳು ಮತ್ತು ತತ್ವಪದಕಾರರ ತಾತ್ವಿಕತೆಯನ್ನು ಅಭಿವ್ಯಕ್ತಿಪಡಿಸುತ್ತದೆ. ಆಧುನಿಕರಣ, ಜಾಗತಿಕರಣ, ನಗರಿಕರಣದಲ್ಲಿ ಮಿಂದೆಳುತ್ತಿರುವ ಇಂದಿನ ಸಮಾಜವು ಮೌಲ್ಯಾಧಾರಿತ ವಾತಾವರಣವನ್ನು ಮೀರಿ ನಾಗರಿಕತೆಯೆನ್ನುವ ವೈಭೋಗದ ಬದುಕಿಗೆ ಅಂಟಿಕೊಂಡು, ಮೌಲ್ಯ, ಆದರ್ಶ, ನೈತಿಕತೆಯನ್ನು ಬರಿದಾಗಿಸಿಕೊಳ್ಳುತ್ತಿದೆ. ಮನುಷ್ಯ ಕಲ್ಯಾಣ, ಸದಾಶಯದ ಭಾವ ಇಂದಿನ ಯುವಸಮುದಾಯಗಳಲ್ಲಿ ಗಣನಿಯವಾಗಿ ಕುಸಿಯುತ್ತಿದೆ. ಪರಿಣಾಮವಾಗಿ ಸಮಾಜದಲ್ಲಿ ಸಮುದಾಯ ಮತ್ತು ವಿವಿಧ ಸಮೂಹಗಳು, ನೈತಿಕ ಮತ್ತು ಆಲಿಂಗನ ಮನೋಭಾವವನ್ನು ಬರಿದಾಗಿಸಿಕೊಳ್ಳುತ್ತಿವೆ. ಇಂತಹ ಕ್ಲಿಷ್ಟಕರವಾದ ಹಾದಿಯೆಡೆಗೆ ಸಾಗುತ್ತಿರುವ ಸಮಾಜವನ್ನು ನೈತಿಕತೆಯೆಡೆಗೆ ಕರೆತರಲು ತತ್ವಪದಗಳು ಅತ್ಯಂತ ಪರಿಣಾಮಕಾರಿ ಮತ್ತು ಕ್ರೀಯಾತ್ಮಕವಾಗಿ ಕೆಲಸ ಮಾಡಿವೆಯೆಂದು ನಿರ್ವಿವಾದವಾಗಿ ಹೇಳಬಹುದು. ಈ ದೆಸೆಯಲ್ಲಿ ಕಡಕೋಳ ಮಡಿವಾಳಪ್ಪನವರ ತತ್ವಪದಗಳು ಸಮಾಜದಲ್ಲಿ ವೈಚಾರಿಕತೆಯ ಕೂಗೆಬ್ಬಿಸಿ, ಸಮಾಜಕ್ಕೆ ಚಲನಾಶೀಲತೆಯೆಂಬ ಮೌಲಿಕತೆಯನ್ನು ತುಂಬಿ ಸಮಾಜದ ಪ್ರಗತಿಗೆ ಕಾರಣವಾಗಿವೆ. ಪ್ರಸ್ತುತ ಲೇಖನವು ತತ್ವಪದ ಸಾಹಿತ್ಯವನ್ನು ಕೇವಲ ಸಾಹಿತ್ಯಕ ಪರಿಧಿಯಿಂದ ಗ್ರಹಿಸದೆ, ಸಾಮಾಜಿಕ ಕಣ್ಣೋಟಗಳಿಂದ ನೋಡಬೇಕಾದ ಅಗತ್ಯತೆಯನ್ನು ಪ್ರತೀಪಾದಿಸುತ್ತದೆ. ಕಡಕೋಳ ಮಡಿವಾಳಪ್ಪನವರನ್ನು ಕೇವಲ ತತ್ವಪದಕಾರನಷ್ಟೆ ಅಲ್ಲ, ಅವರೊಬ್ಬ ಸಮಾಜದ ಬಗ್ಗೆ ಸದಾ ಚಿಂತಿಸುತಿದ್ದ ಸಾಮಾಜಿಕ ಸಹೃದಯಿಯಾಗಿದ್ದರು. ಹಾಗಾಗಿ ಅವರನ್ನು ಸಮಾಜವಿಜ್ಞಾನ ಅಧ್ಯಯನ ಶಿಸ್ತುಗಳು ಸಾಮಾಜಿಕ ಚಿಂತಕರನ್ನಾಗಿ ಪರಿಭಾವಿಸುವ ಅವಶ್ಯಕತೆಯಿದೆ. ಈ ನೆಲೆಯಲ್ಲಿ ಪ್ರಸ್ತುತ ಲೇಖನವು ಅವರ ತತ್ವಪದಗಳ ಸಾಮಾಜಿಕ ಕಾಳಜಿಯನ್ನು ಹೊರಹಾಕುತ್ತದೆ. ಸಮಾಜವನ್ನು ಆವರಿಸಿರುವ ಮೌಢ್ಯ, ಕಂದಾಚಾರ, ಅಗಣಿತ ಸಾಮಾಜಿ–

ಕ ವ್ಯಸನಗಳ ಕುರಿತು ಮಡಿವಾಳಪ್ಪನವರ ಸಾಹಿತ್ಯವು ಧ್ವನಿಯೆತ್ತಿದೆ. ಹೀಗೆ ಪ್ರಸ್ತುತ ಲೇಖನವು ಮಡಿವಾಳಪ್ಪನವರ ಸಾಹಿತ್ಯ ಒಳಗೊಂಡಿರುವ ಸಾಮಾಜಿಕ ನಿಲುವುಗಳನ್ನು ದಾಖಲಿಸುವ ಪ್ರಯತ್ನ ಮಾಡಿದೆ.

**KEY WORDS:**

ಮಡಿವಾಳಪ್ಪ, ಜನಮುಖಿ ಧೋರಣೆ, ಸಾಮಾಜಿಕ ಅಭಿವೃದ್ಧಿ, ಅಭಿವ್ಯಕ್ತಿ, ಸಾಹಿತ್ಯ, ತತ್ವಪದ.

ಮಡಿವಾಳಪ್ಪನವರನ್ನು ಇಂದು ಬಹುವಾಗಿ ಅರ್ಥಮಾಡಿಕೊಳ್ಳುವ ಸಂಕ್ರಮಣದ ಸನ್ನಿವೇಶ ವಿಶಾಲವಾಗಿ ತೆರೆದುಕೊಳ್ಳುತ್ತಿದೆ. ಮಡಿವಾಳಪ್ಪನವರು ಸಾಹಿತ್ಯಕ್ಕಾಗಿ ತತ್ವಪದಗಳನ್ನು ಸೃಜಸದೆ, ಸಮಾಜದಲ್ಲಿ ವಿಸ್ತೃತವಾಗಿ ಹರಡಿದ್ದ ಅಂಕು ಡೊಂಕುಗಳನ್ನು ತಿದ್ದಲು ತತ್ವಪದಗಳ ಮೊರೆಹೋಗಿ ಸಾಹಿತ್ಯ ಕೃಷಿ ಮಾಡಿರುವದು ಅವರ ಸಮಗ್ರ ಸಾಹಿತ್ಯದಿಂದ ಸಾಬೀತಾಗುತ್ತದೆ. ಸಮಾಜದ ಅವ್ಯವಸ್ಥೆಗಳಿಗೆ ಮಿಡಿದು, ಸಮಾಜದ ವಿಕಾಸಕ್ಕಾಗಿ ಹಂಬಲಿಸಿದ, ಸಾಮಾಜಿಕ ವಿಕಾಸದ ಮುಖವಾಣಿಯಾಗಿ ಶ್ರೀ ಕಡಕೋಳ ಮಡಿವಾಳಪ್ಪನವರು ಕಂಡುಬರುತ್ತಾರೆ. ಸಮಾಜದಲ್ಲಿ ಪರಂಪರೆಯಿಂದ ಬಂದ ಮೇಲು, ಕೀಳು, ಉಚ್ಚ, ನೀಚ, ಕಂದಾಚಾರ, ಮೌಢ್ಯಗಳನ್ನು ನೇರವಾಗಿ ಪ್ರೆಶ್ನಿಸುವ ಎದೆಗಾರಿಕೆಯನ್ನು ಇವರ ತತ್ವಪದಗಳು ಹೊಂದಿವೆ. ಮನುಷ್ಯ ಕಲ್ಯಾಣಕ್ಕಾಗಿ ಇವರ ತತ್ವಪದಗಳು ಶ್ರಮಿಸಿವೆ. ಇಂತಹ ಹಲವು ತತ್ವಪದಗಳಲ್ಲಿ 'ಮುಕನಾಗಬೇಕು ಜಗದೊಳು ಜ್ವಾಕ್ಯಾಗಿರಬೇಕು' ಎನ್ನುವ ಸಮಾಜ ಮುಖಿ ತತ್ವಪದವು ಕೂಡಾ ಒಂದು. ಇಂದಿನ ಆಧುನಿಕ ಸಂಕಿರ್ಣ ಸಮಾಜಕ್ಕೆ ಅನ್ವಯಿಸುವಂತಹ ಬದುಕಿನ ವಾಸ್ತವ ಚಿತ್ರಣವನ್ನು ಹಿಡಿದಿಡುವಂತಹ ಬದುಕಿನ ಅಪ್ಪಟ ಸತ್ಯ ಈ 'ಮುಕನಾಗಬೇಕು ಈ ಜಗದೊಳು ಜ್ವಾಕ್ಯಾಗಿರಬೇಕು' ಎನ್ನುವ ಕಡಕೋಳ ಮಡಿವಾಳಪ್ಪನವರ ತತ್ವಪದ. ಸಮತೋಲನದ ಬದುಕನ್ನು ಕಟ್ಟಿಕೊಳ್ಳುವಲ್ಲಿ ಜೀವನದಲ್ಲಿ ಮೌನವು ಬಹುಮುಖ್ಯವಾದದ್ದು ಎನ್ನುವದನ್ನು ಸಾಕ್ಷಿಕ–ರಿಸುವ ಈ ತತ್ವಪದ ತನ್ನದೆಯಾದ ಮಹತ್ವವನ್ನು ಪಡೆದಿದೆ. ಜಗದ ವ್ಯತ್ಯಾಸಗಳನ್ನು, ಶ್ರೇಣಿಕರಣವನ್ನು, ಬೇಧಭಾವಗಳನ್ನು ಗಟ್ಟಿಯಾದ ಧ್ವನಿಯಲ್ಲಿ ಝೇಂಕರಿಸುವ ಚಲನಾಶೀಲತೆಯ ಮನೋಭಾವದ ಪ್ರಗತಿಪರರನ್ನು ಸಮಾಜದ ಒಂದು ವರ್ಗ ಕಡುವಾಗಿ ವಿರೋಧಿಸುತ್ತ ಬಂದಿರುವದು ಇತಿಹಾಸವನ್ನು ಗಮನಿಸಿದಾಗ ಮನದಟ್ಟಾಗುತ್ತದೆ. ಸಮಾಜದ ಉಗಮದ ಇತಿಹಾಸದಿಂದಲೂ ಇಲ್ಲಿಯವರೆಗೆ ಸಮತೆಯೆನ್ನುವದು ಸಮಾಜದ ಬಹುದೊಡ್ಡ ಸವಾಲಾಗಿದೆ. ಇಂತಹ ಸವಾಲಿಗೆ ಪ್ರತಿರೋಧವಾಗಿ ಹಲವು ಚಳುವಳಿಗಳು ಜನ್ಮತಾಳಿದವು, ಇಂತಹ ಚಳುವಳಿಗಳ

ಜೊತೆಗೆ ಪ್ರತಿರೋಧದ ಕೊಗು ಸಾಹಿತ್ಯದಲ್ಲೂ ಕಂಡುಬಂದವು. ಪ್ರಮುಖವಾಗಿ ಬಂಡಾಯ ಸಾಹಿತ್ಯ ಮತ್ತು ತತ್ವಪದಗಳು ಈ ಬಗೆಯನ್ನು ಪ್ರಭಲವಾಗಿ ವಿರೋಧಿಸಿದವು. ಈ ವಿಧದ ಸಾಹಿತ್ಯದ ಮೂಲಕ ಸಮಾಜದಲ್ಲಿ ಜಾಗೃತಿಯನ್ನು ಹಮ್ಮಿಕೊಂಡ ಸಾಹಿತಿ ಮತ್ತು ತತ್ವಪದಕಾರರಿಗೆ ಅನೇಕ ಸಂಕಟಗಳು ಎದುರಾದವು. ಇಂತಹ ಸಂಕಟಗಳಿಗೆ ಕೊರಳೊಡ್ಡಿ ಮೈಗೆಡವಿಕೊಂಡ ಅದೆಷ್ಟೋ ಸಾಮಾಜಿ–ಕ ಚಿಂತಕರು ಸಮಾಜದ ಸುಗಮಕ್ಕಾಗಿ ತಮ್ಮನ್ನು ಸಮರ್ಪಿಸಿಕೊಂಡಿದ್ದಾರೆ. ಸಮಾಜದಲ್ಲಿ ಗಟ್ಟಿಯಾಗಿ ತಳವುರಿದ್ದ ಅಸಹ್ಯಗಳನ್ನು ಬಯಲಾಗಿಸುವ ಶ್ರಮಿಕರನ್ನು ಪಟ್ಟಭದ್ರರು ಸಾಧ್ಯವಿರುವಷ್ಟು ಅವರಿಗೆ ತೊಂದರೆ ನೀಡಿದ್ದಾರೆ. ಅಂತಹ ಸಂಕ್ರಮಣದ ಸನ್ನಿವೇಶದಲ್ಲಿ ಮಡಿವಾಳಪ್ಪನವರಿಂದ ತಯಾರಾದ ಅರ್ಥ ಪೂರ್ಣ ಭಾವಪೂರ್ಣ ತತ್ವಪದವೆ ಈ ಮೂಕನಾಗಬೇಕು ಈ ಜಗದೊಳು ಜ್ವಾಕ್ಯಾಗಿರಬೇಕು ಎನ್ನುವ ಸಾರ್ವಕಾಲಿಕವಾದ ಸತ್ಯ. ಸತ್ಯವನ್ನು ಸಾರಲು ಹೊರಟವರಿಗೆ ಎದುರಾಗುವ ಭೀತಿಯ ಸ್ವರೂಪವನ್ನು ಅಭಿವ್ಯಕ್ತಿಪಡಿಸಲು ಈ ತರಹದ ಭಾವಗಳು ಪ್ರಕಟಿತ ರೂಪವಾಗುತ್ತವೆ ಎನ್ನುವದನ್ನು ಮಡಿವಾಳಪ್ಪನವರು ನಿರೂಪಿಸಿದ್ದಾರೆ. ಸಮಚಿತ್ತದಿಂದ ಸಮಾಜದ ಆಗುಹೋಗುಗಳನ್ನು ಗಮನಿಸಿದರು, ಪ್ರತಿಕ್ರಿಯಿಸದೆ ಮೌನಕ್ಕೆ ಶರಣಾಗಿ ದುರ್ಜನರ ನಿಂದನೆಗಳಿಂದ ದೂರವಿರಬೇಕು ಎನ್ನುವ ಮೂಲಕ ಸತ್ವಯುತವಾದ ವೈಚಾರಿಕವಾದವನ್ನು ಸ್ವೀಕರಿಸುವಷ್ಟು ಸಮಾಜ ಪ್ರಭುದ್ದವಾಗಿರುವಲ್ಲಿ ಮಿತಿಗಳನ್ನು ಎದುರಿಸುತ್ತಿರುವದನ್ನು ಮಡಿವಾಳಪ್ಪನವರು ಗುರುತಿಸುತ್ತಾರೆ. ನೈಜತೆಯನ್ನು ಅಪ್ಪಿಕೊಳ್ಳುವಲ್ಲಿ ಸಮಾಜದ ಬಹುಸಂಖ್ಯಾತ ಜನಸಮುದಾಯಗಳು ತಿಳುವಳಿಕೆ ಮತ್ತು ದೂರದೃಷ್ಟಿಯನ್ನು ಬೆಳೆಸಿಕೊಂಡಿಲ್ಲ. ಮಿಥ್ಯೆವಾದಿಗಳ ಮಿಥ್ಯೆಗಳಿಗೆ ತಮ್ಮ ಮೆದಳೊಪ್ಪಿಸಿರುವದನ್ನು ತಮ್ಮ ತತ್ವಪದಗಳ ಮುಖೇನ ಮಡಿವಾಳಪ್ಪನವರು ದೃಡೀಕರಿಸುತ್ತಾರೆ. ಮೌನದ ಅವಲೋಕನದ ಬದುಕು ಸಮಸ್ಯೆಗಳಿಂದ ಮುಕ್ತವಾಗಿರುತ್ತದೆ ಎನ್ನುವದು ಒಂದರ್ಥದಲ್ಲಿ ಸತ್ಯವಾದರೂ, ಸತ್ಯವನ್ನು ಮೌನದ ಮೂಲಕ ನಗ್ನವಾಗಿಸುವದು ಆತ್ಮದ್ರೋಹವಾಗುತ್ತದೆ. ಮೌನ ಜೀವನದ ಶ್ರೇಷ್ಠ ಆಭರಣವೆ ಆದರೂ ಪ್ರತಿಕ್ರಿಯಿಸುವ, ಪ್ರತಿಸ್ಪಂದಿಸುವ ಭಾವವನ್ನು ಮೋಟಕುಗೊಳಿಸುತ್ತದೆ. ಹಾಗಾಗಿ ಅತಿ ಮೌನವು ಕೂಡಾ ಅಪಾಯಕಾರಿ. ಮಡಿವಾಳಪ್ಪನವರ ದೃಷ್ಟಿಕೋನದಲ್ಲಿ ಅಂದಾಜಿಸುವದಾದರೆ ಸಮಾಜ ಸಮಕಾಲಿನ ವಾಸ್ತವವನ್ನು ಗಟ್ಟಿಯಾಗಿ ಅಭಿವ್ಯಕ್ತಿಸುವದರಿಂದ ಅಭಿವ್ಯಕ್ತಿಕಾರನ ಮೇಲೆ ಸಮಸ್ಯೆಗಳನ್ನ ಸೃಷ್ಟಿಸುವ ಸಾಧ್ಯತೆಗಳು ಹೆಚ್ಚಾಗಿರುತ್ತವೆ. ಕಾರಣ ಸಮಾಜದ ವಿಧ್ಯಮಾನಗಳನ್ನು ಕ್ಷ–ಕಿರಣದಿಂದ ಗಮನಿಸಿದರು ಮಾತಾಡದೆ ಮೂಕನಾಗಿ ಸುರಕ್ಷಿತವಾಗಿರುವದು ಒಳಿತೇನೋ ಎನ್ನುವ ಭಾವಕ್ಕೆ ಒಂದು ಕ್ಷಣಕ್ಕೆ ಬಂದಾಗ

ಮೂಕನಾಗಬೇಕು ಜಗದೊಳು ಜ್ವಾಕ್ಯಾಗಿರಬೇಕು ಎನ್ನುವ ಭಾವ ಅವರಿಂದ ಪ್ರಕಟವಾಗಿರಬಹುದು ಎನ್ನುವ ಅನುಮಾನವನ್ನು ವ್ಯಕ್ತಪಡಿಸಬಹುದು. ಏಕೆಂದರೆ ಮಡಿವಾಳಪ್ಪನವರು ಯಾವ ಮುಲಾಜಿಗೆ, ಭೀತಿಗೆ ಹೆದರಿದವರಲ್ಲ, ನಿರ್ಭಿತಿ ನಿರ್ಭಿಡೆ ತತ್ವಪದಗಳ ವಾರಸುದಾರರಾದ ಅವರು ಯಾವ ಅಂಜಿಕೆಯನ್ನು ಪರಿಗಣನೆಗೆ ತೆಗೆದುಕೊಂಡವರಲ್ಲ. ನೆರವಂತಿಕೆಯನ್ನೇ ತಮ್ಮ ತತ್ವಪದಗಳ ಶಕ್ತಿಯಾಗಿಸಿಕೊಂಡ ತತ್ವಪದಕಾರರಾದ ಇವರಿಂದ ಅನೇಕ ಬಹುಮುಖಿ ಕೊಡುಗೆಗಳು ಸಮಾಜಕ್ಕೆ ಹೆರಳವಾಗಿ ಲಭ್ಯವಾಗಿವೆ. ಮೂಕನಾಗಬೇಕು ಈ ಜಗದೊಳು ಜ್ವಾಕ್ಯಾಗಿರಬೇಕು ಎನ್ನುವ ಈ ತತ್ವಪದಗಳ ಹಲವು ಗುಡಾರ್ಥಗಳನ್ನು ಒಳಗೊಂಡ ಒಂದು ಅರ್ಥಪೂರ್ಣ ಸಂದೇಶವಾಹಕವಾಗಿದೆ. ಸಮಕಾಲಿನ ಸಂದರ್ಭದ ನೆಲೆಯಲ್ಲಿಯು ಇದನ್ನು ಪರೀಕ್ಷಿಸಿದಾಗ ಮೌನವು ಬಹುದೊಡ್ಡ ಸಮಾಧಾನದ ಅಂಶವಾಗಿ ಕಂಡುಬರುವದರಲ್ಲಿ ಯಾವುದೆ ಅನುಮಾನಗಳಿಲ್ಲ. ಮಡಿವಾಳಪ್ಪನವರಿಂದ ನೂರಾರು ವರ್ಷಗಳಿಂದ ಹಿಂದೆಯೇ ಮೂಡಿಬಂದ ಈ ತತ್ವಪದವು ಪ್ರಸ್ತುತ ಸಮಾಜಕ್ಕೂ ಸಾಕಷ್ಟು ಅನ್ವಯವಾಗುತ್ತದೆ. ಅನಾವಶ್ಯಕ ಮಾತುಗಳು ನಿಯಂತ್ರಿಸಿ ಬದುಕಲ್ಲಿ ಸಂತೋಷವನ್ನು ಬರಮಾಡಿಕೊಳ್ಳಬಹುದು. ಪ್ರಗತಿಪರವಾದ ಆಶಯಗಳನ್ನು ಬದಿಗೊತ್ತುವ ಪೊಳ್ಳುಗಳನ್ನು ಹೆರಳವಾಗಿಸಿಕೊಂಡ ಸಮಾಜದಲ್ಲಿ ನಾವಿಂದು ಜೀವಿಸುತಿದ್ದೇವೆ. ಸತ್ಯವನ್ನು ಗಟ್ಟಿಯಾಗಿ ಹೇಳುಲು ಪೂರಕವಾದ ಪರಿಸರದ ಕೊರತೆಯ ಸಂದರ್ಭದ ಸಮಾಜದಲ್ಲಿ ಇಂದು ಬದುಕನ್ನು ಸವೆಸಬೇಕಾದ ಅನಿವಾರ್ಯತೆಯಿದೆ. ಈ ಹಿನ್ನಲೆಯಲ್ಲಿ ಮೂಕ ಮನಸ್ಥಿತಿಗೆ ಒಗ್ಗಿಕೊಂಡವರು ತಮ್ಮ ಸುರಕ್ಷತೆಯನ್ನು ಕಾಯ್ದುಕೊಂಡು ಜೀವನ ಸಾಗಿಸುತ್ತಾರೆ. ಸತ್ಯವನ್ನು ತಡೆಯಬಹುದು ನಿರ್ಮೂಲನೆಗೊಳಿಸಲು ಅಸಾಧ್ಯ. ಈ ತರಹದಲ್ಲಿ ಕಡಕೋಳ ಮಡಿವಾಳಪ್ಪನವರ ಈ ತತ್ವಪದ ಅನೇಕ ಸಾಧ್ಯತೆಗಳಿಗೆ ತನ್ನನ್ನು ತೆರೆದುಕೊಳ್ಳುತ್ತದೆ.

**ಪರಿವರ್ತನಾಶೀಲಾ ಸಮಾಜಕ್ಕೆ ಸಹಾಯಕವಾದ ಮಡಿವಾಳಪ್ಪನವರ ಸಾಹಿತ್ಯ:**

ಜಗತ್ತಿನಲ್ಲಿ ಅನೇಕ ರಾಷ್ಟ್ರಗಳು ತಮ್ಮದೇಯಾದ ಹಲವು ಸಮಸ್ಯೆಗಳನ್ನು ಎದುರಿಸುತ್ತಿದ್ದವು. ಅಂತಹ ದೇಶಗಳ ಅಭ್ಯುದಯಕ್ಕೆ ಹಲವು ಸುಧಾರಕರು ಅವತರಿಸಿ ಆಯಾ ಸಮಾಜದ ಪರಿವರ್ತನೆಗೆ ಕಾರಣವಾಗಿದ್ದು ಇತಿಹಾಸ. ನಮ್ಮ ದೇಶವು ಅಂತಹ ಹತ್ತು ಹಲವು ಸಮಸ್ಯೆಗಳ ಆಗರವಾಗಿತ್ತು. ಇಂತಹ ಸಂಧರ್ಭದಲ್ಲಿ ಅನೇಕ ಸಮಾಜಸುಧಾರಕರು, ಚಿಂತಕರು, ಶಿವಶರಣರು, ದಾರ್ಶನಿಕರು, ಇಲ್ಲಿ ಜನ್ಮವೆತ್ತಿ ಸಮಾಜದ ಅನೇಕ ಸಮಸ್ಯೆಗಳಿಗೆ ಪರಿಹಾರವನ್ನು ಕೊಟ್ಟಿರುವಂತದ್ದು ಎಲ್ಲರಿಗೂ ತಿಳಿದಿರುವ ವಿಚಾರ. ಅಂತಹ ಅನೇಕ ಶಿವಶರಣರು, ದಾರ್ಶನಿಕರಲ್ಲಿ

ಕಡಕೋಳ ಮಡಿವಾಳಪ್ಪನವರು ಕೂಡ ಒಬ್ಬರು. ಮಡಿವಾಳಪ್ಪನವರು ಕೇವಲ ಸಾಹಿತ್ಯದ ದೃಷ್ಟಿಯಿಂದ ತತ್ವಪದಗಳನ್ನು ರಚಿಸದೆ, ಸಮಾಜದ ಪರಿವರ್ತನೆಯ ನೆಲೆಯಲ್ಲಿ ತತ್ವಪದಗಳನ್ನು ಸಮಾಜಕ್ಕೆ ನೀಡಿರುವದು ಸ್ಪಷ್ಟವಾಗುತ್ತದೆ. ಇವರ ತತ್ವಪದಗಳಲ್ಲಿ ಅನೇಕ ರೀತಿಯ ಮಾನವೀಯ ಮೌಲ್ಯಗಳು, ಆದರ್ಶಗಳು, ಸಂಸ್ಕಾರ, ಜೀವಪರನಿಲುವು ಮುಂತಾದವುಗಳು ಸಮೃದ್ಧವಾಗಿವೆ. ಇಂತಹ ಅನೇಕ ಮೌಲ್ಯಗಳು ಸಮಾಜದ ಪರಿವರ್ತನೆಗೆ ಕಾರಣವಾಗುತ್ತವೆ. ಸಾಮಾಜಿ–ಕ ಬದ್ಧತೆ, ಕಾಳಜಿಗಳನ್ನು ಆರಂಭದಿಂದಲೆ ರೂಡಿಸಿಕೊಂಡ ಮಡಿವಾಳಪ್ಪನವರು ಯಾವಾಗಲೂ ಸಮಾಜದ ಕುರಿತು ಚಿಂತಿಸುತ್ತಿದ್ದರು, ಸಮಾಜದ ಒಳಿತು ಅವರ ಕನಸಾಗಿತ್ತು, ಈ ದೆಸೆಯಲ್ಲಿ ಸದಾ ಅವರು ಅನೇಕ ಕಾರ್ಯಗಳು ಕೈಗೊಳ್ಳುತ್ತಿದ್ದರು. ಮಡಿವಾಳಪ್ಪನವರ ಈ ರೀತಿಯ ಬದುಕು ಅವರ ಸಮಾಜಮುಖಿಯ ಚಿಂತನೆಯನ್ನು ಪ್ರತಿಬಿಂಬಿಸುತ್ತದೆ. ಹಾಗಾಗಿ ಮಡಿವಾಳಪ್ಪನವರನ್ನು ಸಮಾಜ ಸುಧಾರಕರ ನೆಲೆಯಲ್ಲಿ ಅರ್ಥಮಾಡಿಕೊಳ್ಳಬೇಕಿದೆ. ಆದ್ಯಾತ್ಮಿಕ ಮತ್ತು ತತ್ವಪದಿಯ ಕ್ಷೇತ್ರಗಳ ಆಚೆಯ ಅವರ ವ್ಯಕ್ತಿತ್ವದ ಪರಿಚಯ ಮಾಡಿಸಬೇಕಿದೆ. ಮಾನವ ಸಮೂಹದ ಅನೇಕ ಸಂವೇದನೆಗಳಿಗೆ ಅವರು ಧ್ವನಿಯಾಗಿದ್ದಾರೆ ಸಮಾಜಲ್ಲಿದ್ದಂತಹ ಅನೇಕ ಬೂಟಾಟಿಕೆಗಳಿಗೆ ತಿಕ್ಷಣವಾಗಿ ಪ್ರತಿಕ್ರಿಯಿಸಿದ್ದಾರೆ. ಅಂಧಾನುಚಾರಣೆಗಳನ್ನು ಬಲವಾಗಿ ವಿರೋಧಿಸಿದ್ದಾರೆ. ದೇವರು ದೈವದ ಬಗ್ಗೆ ಸ್ಪಷ್ಟವಾದ ನಿಲುವನ್ನು ಹೊಂದಿದ್ದರು. ದೇವರನ್ನು ಒಲಿಸಿಕೊಳ್ಳಲು ಪರಿಶುದ್ದವಾದ ಭಕ್ತಿಯೆ ಮುಖ್ಯ ಹೊರತು ಮತ್ತಾವ ವಿಧಿವಿಧಾನಗಳಲ್ಲ ಎನ್ನುವ ಅಂತಿಮ ಸತ್ಯವನ್ನು ಸಮಾಜಕ್ಕೆ ಸಾರಿದ್ದಾರೆ. ಮನುಷ್ಯನಲ್ಲಿರುವ ಅಜ್ಞಾನ, ಅಂಧಕಾರಗಳನ್ನು ಹೋಗಲಾಡಿಸುವಲ್ಲಿ ಇವರ ತತ್ವಪದಗಳು ಗಂಭೀರವಾಗಿ ಕೆಲಸ ಮಾಡಿವೆ. ಮಡಿವಾಳಪ್ಪನವರ ಸಾಹಿತ್ಯ ಕೆಲವೆ ವಿಷಯಗಳಿಗೆ ಸೀಮಿತವಾಗದೆ, ಹಲವು ಉಪಯುಕ್ತ ವಿಷಯಗಳ ಆಗರವಾಗಿದೆ. ಸಮಾಜದ ಅನೇಕ ಜ್ವಲಂತ ಸಮಸ್ಯೆಗನ್ನು ಹೋಗಲಾಡಿಸಿ, ವೈಚಾರಿಕ ಸಮಾಜವನ್ನು ಸ್ಥಾಪಿಸುವ ಮೂಲ ಆಶಯಗಳನ್ನು ಇವರ ಸಾಹಿತ್ಯ ಹೊಂದಿದ್ದು, ಇವರು ಸಮಾಜದ ಕುರಿತಾಗಿ ಹೊಂದಿರುವ ಕಾಳಜಿಯನ್ನು ತೋ–ರಿಸುತ್ತದೆ. ಹಾಗಾಗಿ ಮಡಿವಾಳಪ್ಪನವರನ್ನು ಕೇವಲ ಕೆಲವೆ ನೆಲೆಗಳಲ್ಲಿ ಗ್ರಹಿಸಿಕೊಳ್ಳದೆ ಬಹುಮುಖಿ ನೆಲೆಗಳಲ್ಲಿ ಮಡಿವಾಳಪ್ಪನವರನ್ನು ಗ್ರಹಿಸಿಕೊಳ್ಳಬೇಕಾಗಿದೆ. ಆ ಮೂಲಕ ಇವರನ್ನು ಸಮಾಜ ಸುಧಾರಕರನ್ನಾಗಿ ಗ್ರಹಿಸಿಕೊಳ್ಳಬೇಕು. ಇವರ ಚಿಂತನೆಗಳು ಖಂಡಿತವಾಗಿ ಸಮಾಜದ ಪರಿವರ್ತನೆಗೆ ಕಾರಣವಾಗಿವೆ. ಇವರ ಎಲ್ಲಾ ಚಿಂತನೆಗಳನ್ನು ಜಾಗತಿಕವಾಗಿ ಮುಟ್ಟಿಸಬೇಕಾದ ಅಗತ್ಯತೆ ಇದೆ. ಆ ಮೂಲಕ ಮಡಿವಾಳಪ್ಪನವರನ್ನು ಜಾಗತಿಕ ಚಿಂತಕರನ್ನಾಗಿ ಗ್ರಹಿಸುವ ಅವಶ್ಯಕತೆಯಿದೆ. ಈ

ಮೂಲಕ ಮಡಿವಾಳಪ್ಪನವರ ಕೊಡುಗೆಗಳನ್ನು ಅಮರವಾಗಿಸೋಣ. ಮಹಾಜ್ಞಾನಿ, ತತ್ವಪದಕಾರರು ವೈಚಾರಿಕ ಚಿಂತಕರಾದ, ಕಡಕೋಳ ಮಡಿವಾಳಪ್ಪ ಅವರ ಕು–ರಿತು ಬಹುಮುಖಿ ನೆಲೆಯಲ್ಲಿ ಚರ್ಚೆಯಾಗಬೇಕಿದೆ. ಕನ್ನಡ ಸಾಹಿತ್ಯ ಮತ್ತು ಚ–ರಿತ್ರೆಯಲ್ಲಿ ಅವರ ಅಚ್ಚಳಿಯದ ಹೆಜ್ಜೆಗುರುತುಗಳನ್ನು ಹೆಚ್ಚು ಪ್ರಚುರ ಪಡಿಸಬೇಕಿದೆ. ಕಡಕೋಳ ಮಡಿವಾಳಪ್ಪನವರ ತತ್ವಪದಗಳನ್ನು ಪ್ರೇರಣೆಯಾಗಿಸಿಕೊಂಡು ಕೆಲ ಸಾಹಿತಿಗಳು ಬಂಡಾಯದ ರೀತಿಯ ಕಾವ್ಯ, ಕಥನ ಸೃಷ್ಟಿಸಿ ಮುನ್ನೆಲೆಗೆ ಬಂದಿದ್ದಾರೆ. ಮಡಿವಾಳಪ್ಪನವರ ತತ್ವಪದಗಳು ಸಮಾಜದಲ್ಲಿ ಹೊಸ ಪರಿವರ್ತನೆಗೆ ಕಾರಣವಾಗಿವೆ. ಇವು ಕೇವಲ ತತ್ವಪದಗಳಲ್ಲದೆ ಸಮಾಜದಲ್ಲಿ ಬೇರುರಿದ್ದ ಹಲವು ಜಾಡ್ಯಗಳನ್ನು ಹೋಗಲಾಡಿಸುವಲ್ಲಿ ಕೆಲಸ ಮಾಡಿವೆ. ಇದ್ದದ್ದನ್ನು ಇದ್ದ ಹಾಗೆ ಖಂಡಿಸಿದ ಇಂತಹ ಮೇಧಾವಿಯನ್ನು ಜಗತ್ತಿನಲ್ಲಿ ಎಲ್ಲಿಯೂ ಸಿಗುವದಿಲ್ಲ. ನವ ಸಮಾಜದ ಪರಿಕಲ್ಪನೆಗಳನ್ನು ಇವರ ಚಿಂತನೆಗಳಲ್ಲಿ ಕಾಣಬಹುದಾಗಿದೆ. ಸಮಾಜದ ಕುರಿತಾಗಿ ಇವರು ಹೊಂದಿದ್ದ ಮುನ್ನೊಟಗಳು ಇಂದಿಗೂ ಪ್ರಸ್ತುತವಾಗಿವೆ. ಬಹುಮುಖಿ ನೆಲೆಯಿಂದ ಸಮಾಜವನ್ನು ಗ್ರಹಿಸಿದ ಅಪರೂಪದ ಸಾಮಾಜಿ–ಕ ಚಿಂತಕರನ್ನಾಗಿ ಇಂದು ಸಮಾಜ ಇವರನ್ನು ಅರ್ಥಮಾಡಿಕೊಳ್ಳಬೇಕಿದೆ. ಅಂದಶ್ರುದ್ದೆ, ಕಂದಾಚಾರ, ಮೈಲಿಗೆ, ಮೂಡಿಚಟ್ಟು ಮುಂತಾದ ಮನಸಿನ ವ್ಯಸನಗಳನ್ನು ಮುಲಾಜಿಲ್ಲದೆ ಅವುಗಳನ್ನು ಕಡುವಾಗಿ ವಿರೋಧಿಸಿದ್ದಾರೆ. ಹಲವು ಸಾಮಾಜಿಕ ಅಂಶಗಳನ್ನು ಆಧ್ಯಾತ್ಮಿಕ ನೆಲೆಯಲ್ಲಿ ಪರಿಶೋದಿಸಿದ್ದಾರೆ. ಆದ್ಯಾತ್ಮಿಕ ಕ್ಷೇತವು ಸಾಮಾಜಿಕ ಬದಲಾವಣೆಗಳಿಗೆ ತೆರೆದುಕೊಳ್ಳಬೇಕೆಂದು ಬಲವಾಗಿ ಹಂಬಲಿಸಿದ್ದವರು. ವೈಯಕ್ತಿಕ ಬದಲಾವಣೆ, ಸಮುದಾಯದ ಬದಲಾವಣೆಗೆ ಆ ಮೂಲಕ ಸಾಮಾಜಿಕ ಬದಲಾವಣೆಗೆ ಕಾರಣವಾಗುತ್ತದೆ ಎಂದು ಗ್ರಹಿಸಿದ್ದ ಒಬ್ಬ ಸಾಮಾಜಿಕ ತಜ್ಞರಾಗಿದ್ದರು. ಇವರ ಎಲ್ಲಾ ತತ್ವಪದಗಳನ್ನು ಸೂಕ್ಷ್ಮವಾಗಿ ಗಮನಿಸಿದಾಗ ಇವರು ಅತಿಯಾಗಿ ಕಾಳಜಿವಹಿಸುತ್ತಿದ್ದುದ್ದು ಏಣಿಶ್ರೇಣಿ ಮುಕ್ತ ಸಮಾಜ, ಕಂದಾಚಾರ ರಹಿತ ಸಮಾಜವನ್ನು. ಹಾಗಾಗಿ ಇವರ ಚಿಂತನೆಗಳು ಸಮುದಾಯಿಕ ಅಂಶಗಳನ್ನು ಪುಷ್ಟಿಕರಿಸುತ್ತವೆ. ಜಗತ್ತನ್ನು ಕವಿದಿರುವ ಅಂ–ಧಕಾರವನ್ನು ಹೋಗಲಾಡಿಸುವಲ್ಲಿ ವೈಚಾರಿಕ ಮನಸ್ಥಿತಿ ಬಹಳ ಮುಖ್ಯವೆಂದು ನಂಬಿದ್ದರು. ವೈಚಾರಿಕತೆಯ ಪ್ರಸರಣವೆ ಪ್ರಧಾನ ಅಂಶವಾಗಿ ಇವರ ತತ್ವಪದಗಳನ್ನು ನಾವು ಗ್ರಹಿಸಬಹುದಾಗಿದೆ. ಮಡಿವಾಳಪ್ಪನವರು ಕೇವಲ ತತ್ವಪದಕಾರರಾಗಿ, ಸಾಹಿತ್ಯವನ್ನು ಪ್ರಚುರಪಡಿಸುವ ವ್ಯಕ್ತಿಯಾಗಿ ಕಾಣಿಸದೆ, ಅವರೊಬ್ಬ ಸಮಾಜ ಸುಧಾರಕರಾಗಿ ಕಂಡುಬರುತ್ತಾರೆ. ಹೀಗೆ ಇಂದಿನ ನಾಡಿನ ವಿದ್ವತ್ ವಲಯ ಮಡಿವಾಳಪ್ಪನವರನ್ನು ಗ್ರಹಿಸಬೇಕಿದೆ. ಉತ್ತಮ ಸಮಜ ನಿರ್ಮಾಣದ ಹಲವು

ಅಂಶಗಳನ್ನು ತಮ್ಮ ಚಿಂತನೆಗಳಲ್ಲಿ ದಾಖಲಿಸಿದ್ದಾರೆ. ಇಂತಹ ಅನೇಕ ಅಂಶಗಳನ್ನು ಸಾಮಾಜಿಕ ಅಭಿವೃದ್ಧಿಯಲ್ಲಿ ಇಂದಿನ ಸಮಾಜ ಬಳಸಿಕೊಳ್ಳಬೇಕಾಗಿದೆ.

**ಪರಾಮರ್ಶನ ಗ್ರಂಥಗಳು:**


1. ರೆಹಮತ್ ತರೀಕೆರೆ. (2017). ತತ್ವಪದಗಳ ಪ್ರವೇಶಿಸುವಿಕೆ. ರಾಷ್ಟ್ರೀಯ ಸಂತ ಕನಕದಾಸ ಅಧ್ಯಯನ ಮತ್ತು ಸಂಶೋಧನಾ ಕೇಂದ್ರ. ಬೆಂಗಳೂರು.
2. ಲಟ್ಟೆ ಎಂ. ಎಸ್. (1994). ಕಡಕೋಳ ಮಡಿವಾಳಪ್ಪ. ಕನ್ನಡ ಸಾಹಿತ್ಯ ಅಕಾಡೆಮಿ. ಬೆಂಗಳೂರು.
3. ನಾಗಭೂಷಣ ಬುಗನಡ್ಡು. (2015). ಕಡಕೋಳ ಮಡಿವಾಳಪ್ಪ. ಬಸವ ಅಧ್ಯಯನ ಪೀಠ, ಮೈಸೂರು ವಿಶ್ವವಿದ್ಯಾಲಯ. ಮೈಸೂರು.
4. ರೆಹಮತ್ ತರೀಕೆರೆ. (2018). ಕನ್ನಡ ಸಂಶೋಧನೆ ತಾತ್ವಿಕ ವಿಚಾರ. ಪ್ರಸಾರಾಂಗ, ಕನ್ನಡ ವಿಶ್ವವಿಧ್ಯಾಲಯ. ಹಂಪಿ.
5. ಆಲ್ದಾಳ ಎಲ್. ಬಿ. ಕೆ. (2019). ಕಡಕೋಳ ಮಡಿವಾಳಪ್ಪನವರು. ಕನ್ನಡ ಸಾಹಿತ್ಯ ಪರಿಷತ್. ಬೆಂಗಳೂರು.
6. ಮೀನಾಕ್ಷಿ ಬಾಳಿ (ಸಂ). (2017). ಕಡಕೋಳ ಮಡಿವಾಳಪ್ಪ ಮತ್ತು ಶಿಷ್ಯರ ತತ್ವಪದಗಳು. ರಾಷ್ಟ್ರೀಯ ಸಂತಕವಿ ಕನಕದಾಸ ಅಧ್ಯಯನ ಮತ್ತು ಸಂಶೋಧನಾ ಕೇಂದ್ರ. ಬೆಂಗಳೂರು.
7. ವಿಶ್ವರಾದ್ಯ ಸತ್ಯಂಪೇಟೆ. (2017). ಅನುಭಾವಿ ಕವಿ ಮಡಿವಾಳಪ್ಪ (ಲೇ). ಬಸವಮಾರ್ಗ ಪ್ರತಿಷ್ಠಾನ ಪ್ರಕಾಶನ. ಶಹಾಪುರ.
8. ಮೀನಾಕ್ಷಿ ಬಾಳಿ. (2015). ಬಂಡಾಯದ ಕಿಡಿ ಮಡಿವಾಳಪ್ಪ. ನ್ಯಾಷನಲ್ ಬುಕ್ ಟ್ರಸ್ಟ್. ಇಂಡಿಯಾ.
9. ಮಲ್ಲಿಕಾರ್ಜುನ ಕಡಕೋಳ (ಸಂ) (2022). ಕಡಕೋಳ ನೆಲದ ನೆನಪುಗಳು. ಶ್ರೀ ವೀರೇಶ್ವರ ಪ್ರಕಾಶನ, ಕಡಕೋಳ ಮಹಾಮಠ. ಕಡಕೋಳ.
10. ಮೋಹನದಾಸ್ ಮುಖರ್ಜಿ. (2012). ಸಾಹಿತ್ಯ ಮತ್ತು ಸಮಾಜ. ಪ್ರಕಾಶ ಪಬ್ಲಿಕೇಷನ್ಸ. ಸಹನಾಪುರ.